## ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/01/ಇಎಸ್‌ಟಿ(9)/2018 / 8741

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ: 10/01/2019.

### ಹಿಂಬರಹ

ಕರ್ನಾಟಕ ಸರ್ಕಾರದ ನಡವಳಿಗಳು: ಸರ್ಕಾರಿ ಆದೇಶದ ಪತ್ರ ಸಂಖ್ಯೆ: ಆಇ 61 ಟಿಎಆರ್ 2018 ಬೆಂಗಳೂರು ದಿನಾಂಕ:29/12/2018ರ ಪ್ರತಿಯನ್ನು ಮಾಹಿತಿಗಾಗಿ ಈ ಕೆಳಕಂಡವರಿಗೆ ಕಳುಹಿಸಿಕೊಡಲಾಗಿದೆ.

1. ಈ ಇಲಾಖೆಯ ಅಧೀನಕ್ಕೊಳಪಡುವ ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು, ಸರ್ಕಾರಿ ಪಾಲಿಟೆಕ್ನಿಕ್, ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳು, ಸ್ಟೆರಿಕ್‌ಸಂಸ್ಥೆ, ಬೆಂಗಳೂರು, ಸರ್ಕಾರಿ ಗಣಿ ಶಿಕ್ಷಣ ಶಾಲೆ ಕೆ.ಜಿ.ಎಫ್.ಸಂಸ್ಥೆಗಳ ಪ್ರಿನ್ಸಿಪಾಲರುಗಳಿಗೆ ಮಾಹಿತಿಗಾಗಿ [ಇಲಾಖಾ ವೆಬ್‌ಸೈಟ್ ಮುಖಾಂತರ]
2. ಈ ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳಿಗೆ, ಜಂಟಿ ನಿರ್ದೇಶಕರು(ಆಡಳಿತ), ಆಡಳಿತಾಧಿಕಾರಿ, ಸಹಾಯಕ ಆಡಳಿತಾಧಿಕಾರಿ (1), (2) ಹಾಗೂ (3), ಸಾರ್ವಜನಿಕ ಸಂಪರ್ಕಾಧಿಕಾರಿ ಹಾಗೂ ರಿಜಿಸ್ಟ್ರಾರ್ (ಆಡಳಿತ) ಮಾಹಿತಿಗಾಗಿ
3. ನಿರ್ದೇಶಕರ ಆಪ್ತ ಶಾಖೆಗೆ
4. ಈ ನಿರ್ದೇಶನಾಲಯದ ನಗದು ವಿಭಾಗಕ್ಕೆ ಮಾಹಿತಿಗಾಗಿ
5. ಈ ನಿರ್ದೇಶನಾಲಯದ ಇ.ಎಸ್.ಟಿ.(1) ರಿಂದ (10) ವಿಭಾಗಕ್ಕೆ ಮಾಹಿತಿಗಾಗಿ
6. ಈ ನಿರ್ದೇಶನಾಲಯದ ಇ-ಆಡಳಿತ ವಿಭಾಗಕ್ಕೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ

V. Gow

ಸಹಾಯಕ ಆಡಳಿತಾಧಿಕಾರಿ

Sh-est(9) Endsmnt

15 893

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ನಿಗಮ ಮಂಡಳಿಗಳಲ್ಲಿ ನಿಯೋಜನೆ ಮೇರೆ ಕೆಲಸ ನಿರ್ವಹಿಸುತ್ತಿರುವ ಸರ್ಕಾರಿ ನೌಕರರಿಗೆ ಸಾಮಾನ್ಯ ಭವಿಷ್ಯ ನಿಧಿ ಮುಂಗಡ/ಹಿಂತೆಗೆತಗಳು, ಸರ್ಕಾರಿ ವಿಮೆಗಳು ಹಾಗೂ ಸೇವಾಂತ್ಯ ರಜೆ ನಗಧೀಕರಣ ಮುಂತಾದವುಗಳನ್ನು ಪಾವತಿಸುವ ಬಗ್ಗೆ.

ಓದಲಾಗಿದೆ:-

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಖಜಾನೆ-2) ಆರ್ಥಿಕ ಇಲಾಖೆ ಇವರ ಪತ್ರ ಸಂ:ಖನಿ/ಪಿಎಂಯು/92/2015-16, ದಿ:28.8.2018, ಮತ್ತು 20.11.2018.

ಪ್ರಸ್ತಾವನೆ:-

ಸರ್ಕಾರದ ವಿವಿಧ ಮಟ್ಟದ ಅಧಿಕಾರಿ/ಸಿಬ್ಬಂದಿಗಳನ್ನು ನಿಯೋಜನೆ ಮೇರೆಗೆ ನಿಗಮ ಮಂಡಳಿಗಳಿಗೆ ನಿಯೋಜಿಸಿದ್ದಾಗ ಅವರ ವೇತನ ಭತ್ಯೆಗಳನ್ನು ಸಂಬಂಧಪಟ್ಟ ನಿಗಮ ಮಂಡಳಿಗಳು ಭರಿಸುತ್ತಿದ್ದು, ನಿಗಮ ಮಂಡಳಿಗಳಿಗೆ ನಿಯೋಜಿತರಾಗಿರುವ ಸರ್ಕಾರಿ ನೌಕರರ ಸಂಬಂಧ ಮಂಜೂರಾಗುವ ಭವಿಷ್ಯ ನಿಧಿ ಮುಂಗಡ/ಹಿಂತೆಗೆತಗಳು, ಸರ್ಕಾರಿ(ಗುಂಪು ವಿಮೆಗಳು) ವಿಮೆಗಳನ್ನು ಸಾರ್ವಜನಿಕ ನಿಧಿಯಿಂದ ಹಾಗೂ ಸೇವಾಂತ್ಯ ರಜೆ ನಗಧೀಕರಣವನ್ನು ಸಂಚಿತ ನಿಧಿಯಿಂದ ಸೆಳೆದು ಪಾವತಿಸಲಾಗುತ್ತಿದೆ.

2. ಸಾಮಾನ್ಯ ಭವಿಷ್ಯ ನಿಧಿ ತಾತ್ಕಾಲಿಕ ಮುಂಗಡ, ಅಂಶಿಕ/ಅಂತಿಮ ಹಿಂತೆಗೆತಗಳ ಮತ್ತು ಗುಂಪು ವಿಮೆ ಪಾವತಿಗಳ ಸಂಬಂಧ ನಿಯಮಗಳಾನುಸಾರ ಮಂಜೂರು ಮಾಡಲು ವಿವಿಧ ಮಟ್ಟದ ಅಧಿಕಾರಿಗಳಿಗೆ ಅಧಿಕಾರವನ್ನು ಪ್ರತ್ಯಾಯೋಜನೆಯನ್ನು ಮಾಡಲಾಗಿದೆ.

3. ಆದರೆ, ಆದೇಶ ಸಂ:ID 123 SPG 99 dt:17.11.1999 ರಂತೆ ನೀರಾವರಿ ನಿಗಮದಲ್ಲಿ ಕೆಲಸ ನಿರ್ವಹಿಸುತ್ತಿರುವ ನೀರಾವರಿ ಇಲಾಖೆಯ ಹಿಂದಿನ ಡಿಡಿಓ ರವರು ಇಂತಹ ಕ್ಲೈಮುಗಳನ್ನು ಸೆಳೆದು ಪಾವತಿಸುತ್ತಿದ್ದಾರೆ. ಖಜಾನೆ-2ರಲ್ಲಿ ಪ್ರಸ್ತುತ ಹಣ ಸೆಳೆಯುವ ಅಧಿಕಾರಿಗಳು ಮಾತ್ರ ಬಿಲ್ಲುಗಳನ್ನು ಸೃಜಿಸಿ ಪಾವತಿಗಳನ್ನು ನಿರ್ವಹಿಸಬಹುದಾಗಿದ್ದು, ನಿಗಮ ಮಂಡಳಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದಿನ ಹಣ ಸೆಳೆಯುವ ಅಧಿಕಾರಿಗಳು ಬಿಲ್ಲುಗಳನ್ನು ಸೃಜಿಸಿ ಹಣವನ್ನು ಸೆಳೆಯಲು ಅವಕಾಶವಿರುವುದಿಲ್ಲ. ಆದುದರಿಂದ ಇಂತಹ ಕ್ಲೈಮುಗಳನ್ನು ನಿಯೋಜನೆ ಹೊಂದಿ ಕೆಲಸ ನಿರ್ವಹಿಸುತ್ತಿರುವ ಅಧಿಕಾರಿಗಳ/ನೌಕರರ ಮಾತೃ ಇಲಾಖೆಯ ಮುಖ್ಯಸ್ಥರು ಅಥವಾ ನಿಯಂತ್ರಣಾಧಿಕಾರಿಗಳು ಖಜಾನೆ-2ರಲ್ಲಿ ಸೆಳೆದು ಸ್ವೀಕರ್ತರ ಖಾತೆಗೆ

ಆನ್ ಲೈನ್ ಮೂಲಕ ಜಮೆ ಮಾಡುವ ಬಗ್ಗೆ ಸೂಕ್ತ ಆದೇಶವನ್ನು ಹೊರಡಿಸುವಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಖಜಾನೆ-2) ಮೇಲೆ ಓದಲಾದ ಪತ್ರದಲ್ಲಿ ಕೋರಿರುತ್ತಾರೆ.

4. ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂ:ಆಇ: 61 ಟಿಎಆರ್ 2018,**
**ಬೆಂಗಳೂರು, ದಿನಾಂಕ:29.12.2018.**

ನಿಗಮ, ಮಂಡಳಿಗಳಲ್ಲಿ ನಿಯೋಜನೆ ಮೇಲೆ ಕೆಲಸ ನಿರ್ವಹಿಸುತ್ತಿರುವ ಸರ್ಕಾರಿ ಅಧಿಕಾರಿಗಳ/ ನೌಕರರಿಗೆ ಸಂಬಂಧಿಸಿದಂತೆ ಸಾಮಾನ್ಯ ಭವಿಷ್ಯ ನಿಧಿ ಮುಂಗಡ, ಅಂಶಿಕ/ಅಂತಿಮ ಹಿಂತೆಗೆತಗಳು, ಗುಂಪು ವಿಮೆ ಮತ್ತು ಸೇವಾಂತ್ಯ ರಜೆ ನಗದೀಕರಣದಂತಹ ಕ್ಲೈಮುಗಳನ್ನು ಅವರುಗಳ ಮಾತೃ ಇಲಾಖೆಯ ಮುಖ್ಯಸ್ಥರು ಅಥವಾ ನಿಯಂತ್ರಣಾಧಿಕಾರಿಗಳು ಖಜಾನೆ-2ರಲ್ಲಿ ಸೆಳೆದು ಚಂದಾದಾರನ/ಸ್ವೀಕರ್ತರ ಖಾತೆಗೆ ಆನ್ ಲೈನ್ ಮೂಲಕ ಜಮೆ ಮಾಡಲು ಆದೇಶಿಸಲಾಗಿದೆ. ಈ ಸಂಬಂಧ ಹಿಂದೆ ಸರ್ಕಾರವು ಹೊರಡಿಸಿದ ಆದೇಶಗಳು ರದ್ದಾಗುತ್ತದೆ.

2. ಈ ರೀತಿ ಪಾವತಿಸುವಾಗ ಸಂದರ್ಭಾನುಸಾರ ಭವಿಷ್ಯ ನಿಧಿ ನಿಯಮಗಳನ್ನು ಮತ್ತು ಗುಂಪು ವಿಮೆ ನಿಯಮಗಳನ್ನು ಅನುಸರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

29/12/18

(ಹೆಚ್.ಎ. ಶೋಭ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ.
(ಆರ್ಥಿಕ ನಿಯಮಗಳು, ಆಯವ್ಯಯ
ಸಂಕಲನ ಮತ್ತು ಸಮಿತಿ ಶಾಖೆ)

**ಪ್ರತಿಗಳು:-**

1. ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರ ಬೆಂಗಳೂರು ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕೋರಲಾಗಿದೆ.
2. ಪ್ರಧಾನ ಮಹಾಲೇಖಪಾಲರು, ಲೆಕ್ಕಪತ್ರಗಳು ಮತ್ತು ಹಕ್ಕುಗಳು, ಕರ್ನಾಟಕ, ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5326/5369. ಬೆಂಗಳೂರು.

3. ಪ್ರಧಾನ ಮಹಾಲೇಖಪಾಲರು(ಲೆಕ್ಕ ತನಿಖೆ-1), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.
4. ಪ್ರಧಾನ ಮಹಾಲೇಖಪಾಲರು(ಲೆಕ್ಕ ತನಿಖೆ-2), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.
5. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಆರ್ಥಿಕ ಇಲಾಖೆ (ಖಜಾನೆ-2) 7ನೇ ಮಹಡಿ, ವಾಣಿಜ್ಯ ತೆರಿಗೆ ಇಲಾಖೆ 1ನೇ ಮುಖ್ಯ ರಸ್ತೆ ಗಾಂಧಿ ನಗರ ಬೆಂಗಳೂರು-560009.
7. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
8. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
9. ಎಲ್ಲಾ ಜಿಲ್ಲಾಧಿಕಾರಿಗಳು.
10. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ.
11. ಆರ್ಥಿಕ ಇಲಾಖೆಯ ಸರ್ಕಾರದ ಜಂಟಿ ಕಾರ್ಯದರ್ಶಿಗಳು/ಉಪ ಕಾರ್ಯದರ್ಶಿಗಳು/ಅಧೀನ ಕಾರ್ಯದರ್ಶಿಗಳು/ ಶಾಖಾಧಿಕಾರಿಗಳು.
12. ಎಲ್ಲಾ ಜಿಲ್ಲಾ ಖಜಾನೆಗಳಾಧಿಕಾರಿಗಳು.
13. ನಿರ್ದೇಶಕರು, ಖಜಾನೆ ಇಲಾಖೆ, ಪೋಡಿಯಂ ಬ್ಲಾಕ್, ಬೆಂಗಳೂರು.
14. ಉಪ ನಿರ್ದೇಶಕರು, ಟಿಎನ್ಎಂಸಿ ಖನಿಜ ಭವನ, ಬೆಂಗಳೂರು.
15. ಶಾಖಾ ರಕ್ಷಿತ ಕಡತ/ಹೆಚ್ಚುವರಿ ಪ್ರತಿಗಳು.